ಪ್ರಾಮಾಣಿಕತೆ ಜೊತ್ಗೆ ಶಿಸ್ತಾಗಿ ಬೆಳೆಸಿದ, ಮಕ್ಕಳು ಯಾರ ಮನೆ ಬಾಗಿಲು ಕಾಯದಂಗೆ ಮಾಡಿ, ಒಬ್ಬೊಬ್ರನ್ನೂ ದಂಡೆ ಹತ್ತಿಸಿದ್ದು ಅವರ ತೂಕವನ್ನು ಮತ್ತೆರಡು ಒಂದೆರಡು ಗೇಣು ಹೆಚ್ಚಿಸ್ತು. ಅಣ್ಣತಮ್ಮಂದ್ರು ರಾಮಲಕ್ಷ್ಮಣರ ಹಾಗೆ ಈ ಕಾಲದಲ್ಲೂ ಅವ್ರಲ್ಲಾ ಅಂತ ಆ ಮನೆಯ ಗಂಡು ಮಕ್ಳಾ ನೋಡಿ ಊರಜನ ಮಾತಾಡ್ಕೊಳ್ಳುತ್ತಿದ್ರು. ಆ ಮನೆ ಹೆಣ್ಣುಮಕ್ಕಳನ್ನು ಮದುವೆಯಾಗಿ ತಮ್ಮ ವಂಶದಲ್ಲೂ ಕೆಂಚೇಗೌಡರ ಒಂದಂಶ ಸೇರಲಿ ಅಂತ ಅವ್ರ ಮನೆ ಹೆಣ್ಣು ತಂದ್ಕಬೇಕಂತ ಇಚ್ಚೆಪಟ್ಟವ್ರ ಬಗ್ಗೆ ಹೇಳ್ತಾ ಹೋದ್ರೆ ಉತ್ಪ್ರೇಕ್ಷೆ ಬುಡಿದು ಅಂತ ನಿಮ್ಗೇ ಅನ್ನುಸ್ಬೋದು...

ಹೀಗೆ ಎಲ್ಲಾ ನೆಟ್ಟಗೆ ನೇರವಾಗಿ ನಡೀತಿರೋವಾಗ ಕಳೆದ ದೀಪಾವಳಿ ದಿನ ಮೈಗೆಲ್ಲಾ ಎಣ್ಣೆ ತಿಕ್ಕಂಡು, ಎಳೆ ಬಿಸ್ಲಲ್ಲಿ ಮೈ ಕಾಯಿಸ್ಕೊಂಡು, ಸ್ನಾನದ ಮನೆಗೆ ಹೋದಾಗ ಕಾಲು ಜಾರಿ ಬಿದ್ದ ಗೌಡರಿಗೆ, ಹಾಗೆ ಬಿದ್ದದ್ದೇ ನೆಪವಾಗಿ ಹಾಸಿಗೆ ಹಿಡಿಯುವಂತಾದದ್ದು ಮಾತ್ರ ದುರ್ವಿಧಿಯಲ್ಲದೆ ಮತ್ತೇನು? ಎಂದೂ ಮನೇಲಿ ಬೆಳಕಿದ್ದೊತ್ತು ಮುಸ್ಗಾಕೊಂಡು ಮಲಗದ ಆ ಹಿರೀ ಜೀವಕ್ಕೆ ಇದು ಎಷ್ಟು ಆಘಾತ ತಂದಿತಂದ್ರೆ, ಬೇರೆಯವರಿಂದ ಸೇವೆ ಮಾಡಿಸ್ಕೋವಂಗೆ ಆಯ್ತಲ್ಲಾ ಅನ್ನೋ ಕೊರಗೂ ಜೊತ್ಗೆ ಸೇರ್ಕಂಡು ಎಂದೂ ಇರದ ಕಾಯ್ಲೆ ಕಸಾಲೆ ಮನೋರೋಗದಂಗೆ ಅಂಟ್ಕಂಡು ಅವುರ್ನ ಹಣ್ಣು ಮಾಡ್ಬುಟ್ತು.

ಕೆಂಚೇಗೌಡರು ತೀರಾ ಹಾಸ್ಗೆ ಹಿಡಿದ್ರೆಂಬ ಸುದ್ದಿ ಮುಟ್ಟಿದ ತಕ್ಷಣ ಬ್ಯಾರೆಬ್ಯಾರೆ ಊರಲ್ಲಿದ್ದ ಕುಟುಂಬದ ಸದಸ್ಯರೆಲ್ರೂ ಸಂಸಾರ ಸಮೇತ ಬ್ಯಾಡಳ್ಳಿಗೆ ಧಾವಿಸಿ ಬರದಿದ್ದರೆ ಹೇಗೆ? ಬಂದವ್ರೆಲ್ಲಾ ಗೌಡ್ರ ಹಿರೀ ಜೀವದ ಅವಸ್ಥೆ ಕಂಡು ದುಃಖ ಪಟ್ಕಂಡ್ವು. ಹಾಸ್ಗೆ ಹಿಡ್ದು ಮೂರು ತಿಂಗಳಾಗಿಲ್ಲ, ಅದೇ ಚಿಂತೀಲೇ ನವೀತಾ ನವೀತಾ ಗೊರಗೊರ ಸದ್ದಲ್ಲಿ ಇಷ್ಟು ದಿನ ಹೇಗೋ ಉಸಿರಾಡಿಕೊಂಡಿದ್ದ ಗೌಡ್ರಾತ್ಮ ಈ ಸರೊತ್ತಲ್ಲಿ ದೇಹ ಕಳಚ್ಕಂಡ ನಿರಾಳವಾದ್ರು.

ಅರೆಜೀವವಾಗಿದ್ದ ಗೌಡರಿಗೆ ಹಗಲೂ ರಾತ್ರಿ ನೋಡ್ದೆ, ಅಸ್ನೋ ಉಸ್ನೋ ಅನ್ದೆ, ಬೀಸಣಿಗೆ ಆದ್ರೆ ಬೀಸಣಿಗೆ ಹಿಡ್ದು, ಸೀರೆ ಸೆರಗಾದರೆ, ತಾನುಟ್ಟ ಸೀರೆಯ ಸೆರುಗನ್ನೇ ಹಿಡ್ದು ಈ ಕೈ ಸೋತಾಗ ಆ ಕೈಗೆ, ಆ ಕೈ ಸೋತಾಗ ಈ ಕೈಗೆ ಬದಲಿಸ್ತಾ, ಗಾಳಿ ಬೀಸ್ತಾ ಅವರ ತಲೆದಸೀಲೇ ಹರ–ಸಿವಾ ಅಂತ ಯಮಧರ್ಮರಾಯ ಬಂದ್ರೆ ಬೈದು ಓಡ್ಸೋಕೆ ಮನಸ್ಸು ಮಾಡ್ದಂಗೆ ಅಲುಗಾಡ್ದೇ ಕೂತಿದ್ದ ಲಕ್ಷ್ಮಕ್ಕ ಯಾವ ಕ್ಷಣದಲ್ಲಿ ಜೋಮು ಹತ್ತಿ ತೂಕಡಿಸಿದ್ರೋ... ಆ ಕ್ಷಣವೇ ಯಜಮಾನ್ರ ಜೀವ ಶಿವನಪಾದ ಸೇರ್ಕಂತು.

ಇಷ್ಟೂ ದಿನ ಉಸ್ರಲ್ಲಿ ಉಸ್ರಾಗಿ ಕಾದುಕೊಂಡಿದ್ದ, ತನ್ನ ಸಕಲಸೌಭಾಗ್ಯವೇ ಗೌಡ್ರೆಂದು ನಂಬಿ ನಡೆದುಕೊಂಡಿದ್ದ ಲಕ್ಷ್ಮಕ್ಕಂಗೆ ಗೌಡ್ರು ಇನ್ನು ನನ್ನ ಕೈಬಿಟ್ಟ ವಸ್ತು ಎಂದು, ಒಂದು ಜೋಂಪಿಗೆ ತೂಕಡಿಸಿ ಬಿದ್ದ ಕ್ಷಣ ಮಾತ್ರದಲ್ಲೇ ಗೊತ್ತಾಯ್ತು. ಉಸಿರು ನಿಂತದ್ದು ಕಂಡು ಎದೆ ಧಸಕ್ ಎನಿಸಿ, ಜೀವ ಒಯ್ಯಲು ಬಂದ ಯಮಧರ್ಮರಾಯನಿಗೆ ಸುತ್ಲೂ ಹುಡುಕಿ, ಕಾಣದೆ ಕಳವಳಗೊಂಡು ಚೀರಿದ ಲಕ್ಷ್ಮಕ್ಕನ ಕೂಗಿಗೆ ನಡುಮನೆಯಲ್ಲಿ ಬಂದು ನಿಂತಿತು ಮನೆಮಂದಿ.

ಗೌಡರ ಸಾರ್ಥಕ ಜೀವನದ ಬಗ್ಗೆ ಎಲ್ಲರಿಗೂ ಗೌರವವಿತ್ತು. ಯಾವುದೇ ಮರ್ಯಾದೆಗೆ ಕುಂದುಬರದ ಹಾಗೆ ಬಾಳಿ ಬದುಕಿದ್ದ ಅಪ್ಪಯ್ಯ, ಈಗ ತಮ್ಮೆಲ್ರನ್ನೂ ಬಿಟ್ಟು ಹೋಗಿದ್ದಕ್ಕೆ ಮೊದ್ಲ ಬಾರಿ ತಬ್ಬಲಿಗಳಾದ ಹಾಗೆ ಅನ್ನುಸ್ತು. ಅಪ್ಪಯ್ಯ ಸ್ಥಿತಿ ಹೀಗ್ಹೀಗೆ ಹದಗೆಟ್ಟಿದೆ ಅಂತ ಗೊತ್ತಾಗಿದ್ರೂ ಕ್ಷಣಕ್ಷಣಕ್ಕೂ ಭೂಮಿ ರುಣ ಅವರ್ಗೆ ತೀರಿತೂಂತ ಭಾವಿಸುತ್ತಿದ್ರೂ, ದೇಹದೊಳ್ಗಿದ್ದ ಕುಟುಕುಜೀವ ಅವರ್ನೆಲ್ಲಾ ಇಲ್ಲೀಗಂಟ ಸಮಾಧಾನಿಸುತ್ತಿತ್ತು. ಅವ್ವ ಕಿಟಾರನೆ ಕಿರುಚಿಕೊಂಡ ಕ್ಷಣ ಎಲ್ಲರ ಆ ಭರವಸೆಯೂ ಕಿತ್ಕೊಂಡು ಹೋಗಿ, ಹೃದಯ ಬಿರಿಯಿತು.

‘ಮುಂದೇನು?’ ಎಂಬ ಪ್ರಶ್ನೆ ಮನೇಮಂದೀನ ಕಾಡದಂತೆ ಎಲ್ಲವನ್ನೂ ಗಂಟೆಯೊಂದರಗಳಿಗೆ ಕಳೆಯೋಷ್ಟರಲ್ಲಿ ಯೋಜಿಸಿ ಕಾರ್ಯರೂಪಕ್ಕೆ ತರಲಾಯ್ತು. ದೂರದೂರಿನ ಸಂಬಂಧಿಕರಿಗೆ ಫೋನ್ ಮಾಡೋರು ಮಾಡಿ ವಿಷಯ ಹೇಳುದ್ರು; ಗಳಿಗೆ ಲೆಕ್ಕಾಚಾರ ಮಾಡಿ ತಿಥಿಕಾರ್ಯ ಮಾಡೋಕೆ ಶಾಸ್ತ್ರ ನೋಡೋರ್ಗೆ ಅನುಕೂಲ ಆಗ್ಲೀಂತ ಗೌಡರ ಜೀವಹೋದ ಗಳಿಗೆಯನ್ನು ಗುರುತು ಮಾಡಿಕೊಂಡು ಊರ ತಿಮ್ಮಪ್ಪನ ಗುಡಿ ಪುಜಾರಿಗೆ ತಿಳಿಸಲು ಅವರ ಮನೆ ಕಡೆಗೆ ಗೌಡರ ನಡುಕಲು ಮಗ ಪ್ರಸಾದನೇ ಹೊರಟ. ಚಟ್ಟ ಕಟ್ಟಲು ಪಕ್ಕದ ಮನೆ ಮರಿಯಣ್ಣ ಸೊಂಟಕ್ಕೆ ಕೊಡಲಿ ಸಿಕ್ಕಿಸಿಕೊಂಡು ತೆಂಗಿನಗರಿ ಇಳಿಸಲು ಹಿತ್ತಲಿನ ಹುಲ್ಲುಮೆದೆ ಬಳಿಯ ತೆಂಗಿನ ಮರಕ್ಕೆ ಹತ್ತಿದ; ತಮಟೆಯವರಿಗೆ ತಮಟೆ ಬಿಸಿ ಕಾಯಿಸುವಂತೆ ತಿಳಿಸಿ ಹಾಗೇ ಹೊಲದಲ್ಲಿ ಚಿತೆಗೆ ಸೌದೆ ಒಟ್ಟುವಂತೆ ಗದ್ದೆಯಾಳು ಮಲ್ಲಣ್ಣನಿಗೆ ಯಾರೋ ಹೇಳಿಕಳಿಸುದ್ರು. ಬರೋರ್ವಗೆ ಕೂರಲು ಮನೆಮುಂದೆ ಪೆಂಡಾಲು–ಕುರ್ಚಿ ತಂದು ಹಾಕುವಂತೆ ಸಮೀಪದ ಪಟ್ಟಣದ ಶಾಮಿಯಾನದ ಅಂಗಡಿಯ ಸೋಮಣ್ಣನಿಗೆ ಫೋನ್ ಹೋಯ್ತು; ಕಾಫಿಟೀ, ತಿಂಡಿ ನೀರಿನ ವ್ಯವಸ್ಥೆ ಮಾಡಲು ಮಾದೇಶ್ವರ ಹೊಟೇಲಿನ ಮರ್ಲಿಂಗನಿಗೆ ಹೇಳಾಯ್ತು.

ಊರ ಮಂದಿ ಎಲ್ಲಾ ಮುಂದಿನ ಸಮಸ್ತ ಕಾರ್ಯಗಳ್ಗೆ ದನಿಗೂಡಿಸ್ತಾ, ಕೈಜೋಡಿಸ್ತಾ ಗಡಿಬಿಡಿಯಿಂದ ಓಡಾಡಹತ್ತಿದ್ರು. ಉಳಿದ ಜನ್ವಂತೂ ಕೆಂಚೇಗೌಡರ ಮನೆಯ ಶೋಕ ತಮ್ಮದೇ ಮನೆ ಶೋಕವೆಂದು ಭಾವಿಸಿ ಕಂಬನಿ ಮಿಡಿದರು. ಮುಂದಿನ ಕಾರ್ಯ ನಡೆಸಲು ಕೈ ಜೋಡಿಸಿ ಓಡಾಡುದ್ರು. ಯಾವ ಕೆಲಸಕ್ಕೂ ತಾವು ಸೈ ಎಂದು ಬಾಯ್ಬಿಟ್ಟು ಹೇಳಲಿಲ್ಲ ಅಷ್ಟೆ. ಒಟ್ನಲ್ಲಿ ಬ್ಯಾಡಳ್ಳೀ ಜನರ ಒಗ್ಗಟ್ಟನ್ನು ಜಾತ್ರೆ, ಹಬ್ಬ, ಮದ್ವೆ, ಸಾವ್ಗಳಲ್ಲಿ ಕಾಣ್ಬೇಕು ಅನ್ನೋ ಮಾತಿಗೆ ಉದಾಹರಣೆಯಂತಿತ್ತು ಆ ದಿನ.

ಇತ್ತಾ ಕಡೆ, ‘ನಮ್ಮವ್ವಾ ಮಾ ತಾಯಿ, ಮದುವಾಗಿ ಬಂದಾಗಿಂದ ಗಂಡ–ಮನೆ–ಮಕ್ಕಳ ಬಿಟ್ಟು ಬೇರೆ ಯೋಚಿಸ್ದ ಲಕ್ಷ್ಮಕ್ಕ, ಗೌಡರು ಹಾಸಿಗೆ ಹಿಡಿದಾಗಿನಿಂದ ಸರಿಯಾಗಿ ಅನ್ನಾಹಾರ ಸೇವಿಸದ ಲಕ್ಷ್ಮಕ್ಕ, ಒಂದರೆಗಳಿಗೆ ಜೀವವಿಲ್ಲದ ಗಂಡನ ಶವದ ಬಳಿ ಕುಳಿತಿದ್ದ ಲಕ್ಷ್ಮಕ್ಕ, ಈಗ್ಗೆ ತಿಂಗಳ ಹಿಂದೆ ‘ವಸಿ ಎದೆ ಚಳುಕ್ ಅಂತಾದೆ’ ಎಂದು ನೆಲಕ್ಕೆ ಕುಸ್ದಿದ್ರು. ‘ಯಾವ ಆಸ್ಪತ್ರೆ ಬಾಗ್ಲೂತಾಕೋಗದು ಬ್ಯಾಡ’ ಅಂತ ಹಟ ಮಾಡ್ತಿದ್ದಾಗ, ‘ನನ್ ಜೀವ ಇರೋಗಂಟಾನಾದ್ರೂ ನಿನ್ ಜೀವ ಇರ್ಲಿ ಕನಾ... ಒಂದೆಜ್ಜೆ ಆಸ್ಪತ್ರೆಗೆ ಓಗ್ಬುಟ್ ಬಾ’ ಅಂತ ಕ್ಷೀಣ ಸ್ವರದಲ್ಲಿ ಗೌಡ್ರು ಯೋಳುದ್ ಮ್ಯಾಕೆ, 108 ಗಾಡಿ ಕರಸ್ಕಂಡು ಅದರಲ್ಲಿ ಮಂಡ್ಯಾ ದೊಡ್ಡಾಸ್ಪತ್ರೆಗೆ ಕರ್ಕೊಂಡೋಗಿ ತಪಾಸ್ಣೆ ಮಾಡ್ಸುದಾಗ್ಲೇ ಗೊತ್ತಾದುದ್ದು – ‘ಲಕ್ಷ್ಮಕ್ಕನ ಶರೀಲವೂ ರುದಯವೂ ಸೂಕ್ಷ್ಮ ಆಗ್ಬುಟ್ಟದೆ ಅಂತ ದೊಡ್ಡಾಕುಟ್ರು ಯೋಳುದ್ರು’ ಎಂದು ಮನೆಯಾಳಂಗಿದ್ರೂ ಮನೆ ಆಳಂಗೆ ಮಡಿಕಂಡಿರದ, ಗೌಡರ ತೋಟ ತುಡಿಕೆ ನೋಡ್ಕತಿದ್ದ ಗುರುಮಲ್ಲ ಮತ್ತವನ ಯೆಡ್ತಿ ಮಲ್ಲವ್ವ ಮನೆ ಜನ, ಊರ ಜನಕ್ಕೆಲ್ಲಾ ಯೇಳಿ, ‘ಇನ್ಮ್ಯಾಕೆ ಲಕ್ಷ್ಮಕ್ಕನ್ನ ಸಾನೇ ಉಸಾರಾಗಿ ನೋಡ್ಕಾಬೇಕು’ ಎಂದು ತಾವೇ ಜವಾಬ್ದಾರಿ ವಹಿಸ್ಕಂದ್ರು.

ಲಕ್ಷ್ಮಕ್ಕ ‘ನಂದೇನಿದ್ರೂವೇ ಇನ್ನು ಮುಗ್ದೋಯ್ತು ಮಲ್ಲೀ, ನಮ್ಮೆಜಮಾನನ ಜೊತೆ ಸಿವಾ ಅಂತ ನಾನೂವೇ ಕೈಲಾಸ ಸೇರ್ಕಂಡ್ರೆ ಸರಿ, ಇಲ್ಲಾ ಅವುಗ್ರಿಂತ ಮದ್ಲೇ ಓದ್ರೂವೀ ಮುತ್ತೈದೆ ಸಾವಾಯ್ತದೆ ಕಣಾ, ನಂಗೌಡ್ರ ಬುಟ್ಬುಟ್ಟು ನಾ ಎಂಗಿರಕಾದಾತು?’ ಅಂತ ಆವಾಗಾವಾಗ ರೋದಿಸೋರು.

ಹೀಗೆ ಗೌಡ್ರೊಟ್ಗೆ ತಾವೂ ಅರೆ ಜೀವವಾಗಿ, ಯಾವಾಗಾದ್ರೂ ಸೈ, ದೇಹ ತೊರೆಯೋಕೆ ತಾನೂ ಸಿದ್ಧ ಅನ್ನೊವಂಗಿದ್ದ ಲಕ್ಷ್ಮಕ್ಕ, ಗೌಡ್ರು ಉಸಿರು ಹಾರಿದ ಸ್ವಲ್ಪ ಹೊತ್ಗೇ ಗಂಡನ ಪಾದ ಬಿಟ್ಟೆದ್ರು. ಹಾಗೆ ನಿಂತವರೇ, ನಿಲ್ಲೋಕು ಆಗ್ದೇ ನಿಶ್ಯಕ್ತಿಯಿಂದ ತೂರಾಡ್ತಾ ದೇವರ ಮನೆ ಹೊಕ್ಕು, ಮಂದಿಯೆಲ್ಲಾ ನೋಡುತ್ತಿದ್ದಂತೆ ಕದವಿಕ್ಕಿಕೊಂಡರು.

ಹಸೆಮಣೆ ಮೇಲಿಂದ ಇಳಿದವರೇ ಗಂಡನ ನೆರಳಾಗಿ ಇಷ್ಟು ವರ್ಷ ಅನುಸರಿಸ್ಕಂಡು ಈ ಮನೆಗೆ ಬಂದಿದ್ದ ಲಕ್ಷ್ಮಕ್ಕನ ದುಃಖ ಅವರು ಎದೆಬಾಯಿ ಬಡ್ಕಂಡು ರೋದನೆ ಮಾಡ್ದೇ ಹೋದ್ರೂ ಯಾರ್ಗಾದರೂ ತಿಳಿಯುವಂತದ್ದೇ. ಆದ್ರೂ ಹೆಣಾ ಮನೇಲಿಟ್ಕಂಡು ಸೂತ್ಕ ಆಗಿರ್ಬೇಕಾದ್ರೆ, ಮತ್ಯಾಕ್ ಈವಕ್ಕ ದ್ಯಾವ್ರ ಕೋಣೆಗ್ಹೋದ್ರು? ಅಂತ ಬಂದಿದ್ದ ಜನ್ವೆಲ್ಲಾ ವಿಸ್ಮಯ ಪಟ್ಕಂಡ್ರು! ಗೌಡ್ರ ಹಿರಿಸೊಸೆ ಜಯಂತಿಗೆ ಊರ ಪಂಚಾಯ್ತಿ ಚೇರ್ಮನ್ನರ ಹೆಂಡತಿ ಸಿದ್ದವ್ವ, ‘ಒಳಿಕೋಗಿ ನೋಡವ್ವಾ’ ಎಂದು ಸಂಜ್ಞೆ ಮಾಡಿದ್ರು. ಇನ್ನೇನು ಜಯಂತಿ ದೇವ್ರುಮನೆ ಬಾಗ್ಲು ದೂಕಬೇಕು ಅಂತಿದ್ದಂಗೇ ಲಕ್ಷ್ಮಕ್ಕನೇ ಹೊರಗೆ ಬಂದ್ರು. ಬಂದವ್ರೇ, ಪುನಃ ತಾರಾಡ್ತಾ ತೂರಾಡ್ತಾ ಕೆಂಚೇಗೌಡ್ರ ಬಳಿ ಬಂದು ದೊಪ್ಪನೆ ಕುಸಿದರು.

ಹಿರೀ ಸೊಸೆಯೂ ದೊಡ್ಡಮಗಳೂ ಸೇರಿ ಅವ್ವನ್ನ ಎತ್ತಿ ನೋಡಲಾಗಿ, ಹಣೆ ತುಂಬಾ ಹಚ್ಕಂಡಿದ್ದ ಕುಂಕುಮ, ಕೆನ್ನೆ ತುಂಬಾ ಇಟ್ಟಿದ್ದ ಅರಿಶಿನದ ಹುಡಿಗಳು ಗೌಡ್ರ ಎದೆ ಮೇಲೆ ಕಲಸಿ ಹರಡಿದ್ದವು...

ಪ್ರತಿಕ್ರಿಯಿಸಿ: feedback@sudha.co.in